

ಸ್ಥಿತಿಯಲ್ಲಿ ನೋಡುತ್ತಿದ್ದಂತೆ ನನಗೆ ದಿಗಿಲಾಯಿತು.

ಏನಾಗಿರಬಹುದು?

ಏನೊಂದೂ ತಿಳಿಯುತ್ತಿಲ್ಲ. ನನಗೆ ಈ ಊರು ಹೊಸದು. ಇಲ್ಲಿನ ಜನರು ಅಪರಿಚಿತರು. ಇನ್ನು ಇಂಥ ಸಂದರ್ಭವನ್ನಂತೂ ಇಡೀ ಜೀವಮಾನದಲ್ಲೇ ಕಂಡಿಲ್ಲ. ಹೀಗಾಗಿ ಇವೆಲ್ಲ ಒಗಟು ಒಗಟಾಗಿ ಕಾಣತೊಡಗಿತ್ತು. ಆದರೂ ನನ್ನೊಳಗೆ ಕ್ಷಣದಲ್ಲೇ ಹತ್ತಾರು ಪ್ರಶ್ನೆಗಳು ಉದ್ಭವಗೊಳ್ಳುತ್ತಲೇ ಹೋದವು. ಚಪ್ಪಲಿಗಳಿಗೆ ಈ ಸ್ಥಿತಿ ಹೇಗೆ ಬಂತು? ಕಾರಣವೇನು?- ಯಾರಾದರೂ ಕಿಡಿಗೇಡಿಗಳ ಕೈ ಚಳಕವೋ ಅಥವಾ ಮಕ್ಕಳ ಹುಡುಗಾಟವೋ ತಿಳಿಯುತ್ತಿಲ್ಲ. ಈ ಬಗೆಯ ಹಲವಾರು ದ್ವಂದ್ವಗಳ ನಡುವೆಯೇ ಮತ್ತೊಂದು ಹೊಳೆಯಿತು. ಹೆಚ್ಚಾಗಿ ಹಳ್ಳಿಕಡೆಗೆಲ್ಲ ಮೂಢನಂಬಿಕೆಯ ಆಚರಣೆಗಳು ಗಾಢವಾಗಿವೆ. ಹೀಗಾಗಿ ಯಾರಾದರೂ ಮಂತ್ರ- ತಂತ್ರಗಳ ಉದ್ದೇಶಕ್ಕೆ ಹೀಗೆ ಮಾಡಿಟ್ಟು ಹೋಗಿರಬಹುದಾ? ಅನ್ನಿಸಿತಾದರೂ, ಮೇಲ್ನೋಟಕ್ಕೆ ಅಲ್ಲೇನೂ ಅಂಥ ಪುರಾವೆಗಳು ಸಿಗಲಿಲ್ಲ. ಅಲ್ಲಿ ಕುಂಕುಮವೋ ನಿಂಬೆಹಣ್ಣೋ ಏನೆಂದರೇನೂ ಇರದೆ ಆ ಸಂಶಯವೂ ಅರ್ಥ ಕಳೆದುಕೊಂಡಿತು. ಹಾಗಾದರೆ ಆ ಚಪ್ಪಲಿಗಳೇ ಸ್ವತಃ ಆತ್ಮಹತ್ಯೆ ಮಾಡಿಕೊಂಡವೇ?- ಈ ಯೋಚನೆಗೆ ನನ್ನನ್ನು ನಾನೇ ಅಣಕಿಸಿಕೊಂಡು ನಕ್ಕುಬಿಟ್ಟೆ. ನಿರ್ಜೀವ ವಸ್ತುವೊಂದು ಆತ್ಮಹತ್ಯೆಗೆ ಅಣಿಯಾಗುವುದುಂಟೇ? ಹಾಗೊಂದು ವೇಳೆ ಅವಕ್ಕೂ ಹುಟ್ಟು- ಸಾವುಗಳಿದ್ದರೆ 'ನಿರ್ಜೀವ' ಅಂತಾದರೂ ಕರೆಯುವ ಜರೂರತ್ತೇನಿತ್ತು. ಇವೆಲ್ಲ ಅಸಾಧ್ಯವಾದ ಮಾತುಗಳು. ಹಾಗಾದರೆ ಅಸಲಿಗೆ ಅಲ್ಲಿ ನಡೆದದ್ದಾದರೂ ಏನಿರಬಹುದು?

ಸುತ್ತ ಜನಸಮೂಹದ ಕಡೆ ಕಣ್ಣಾಡಿಸಿದೆ. ಅವರ ಕಣ್ಣುಗಳಲ್ಲಿಯೂ ಕುತೂಹಲ ಆವರಿಸಿತ್ತು. ಎಲ್ಲರ ಮುಖದಲ್ಲಿಯೂ ಪ್ರಶ್ನೆಯ ಗೆರೆಗಳು ಸ್ಪಷ್ಟವಾಗಿ ಕಾಣತೊಡಗಿದ್ದವು. ಯಾರೊಬ್ಬರಲ್ಲಿಯೂ ಇದಕ್ಕೆ ಉತ್ತರವಿದ್ದಂತೆ ಕಾಣಲಿಲ್ಲ. ಅಲ್ಲಿನ ಯಾರ ಕೈಯ್ಯಲ್ಲೂ ನನ್ನಂತೆ ಛತ್ರಿ ಇದ್ದಿರಲಿಲ್ಲ. ಕೆಲವರ ಕಾಲುಗಳಲ್ಲಿ ಚಪ್ಪಲಿಗಳೂ ಇಲ್ಲ. ಆ ರಹಸ್ಯ ಪ್ರಕರಣದಲ್ಲಿ ಎಲ್ಲರೂ ಅಷ್ಟರಮಟ್ಟಿಗೆ ಬಿಸಿಲನ್ನೂ ಲೆಕ್ಕಿಸದೆ ತಲ್ಲೀನರಾಗಿದ್ದಾರೆ. ಇಡಿಯಾಗಿ ಸುಡಬಲ್ಲ ಬಿಸಿಲು ಕೂಡ ಅವರ ಕುತೂಹಲಕ್ಕೆ ಸೋತು ಬಲಹೀನವಾಗಿತ್ತೇನೋ ಎಂಬಂತೆ ನಿಂತಿದ್ದಾರೆ.

ಈಗ ನಾನೂ ಛತ್ರಿ ಇಳಿಸಿದೆ.

'ವಿಷಯ ಏನಪ್ಪ?' ಕುತೂಹಲ ತಡೆಯಲಾಗದೆ ಪಕ್ಕದಲ್ಲಿದ್ದ ನಡುವಯಸ್ಕ ವ್ಯಕ್ತಿಯನ್ನು ಹೀಗೆ ಕೇಳಿದೆ.

'ಏನೋ ಸರ್, ನಮಗೂ ಗೊತ್ತಾಗ್ತಾ ಇಲ್ಲ. ಯಾರೋ ಒಬ್ಬ ಸಣ್ಣ ಹುಡುಗ ಅಂತೆ. ಮುಖದಲ್ಲಿ ಮೀಸೇನೂ ಇಲ್ಲ ಅಂತಿದ್ರು. ಅವ್ನೇನೋ ಈಗೊಂದು ಗಂಟೆ ಹಿಂದಷ್ಟೇ ಬಂದು ಚಪ್ಪಲೀನಾ ಈ ಮರಕ್ಕೆ ಕಟ್ಟುತಾ ಇದ್ನಂತೆ. ನಮ್ಮ ದಿನಸಿ ಅಂಗಡಿ ಶರಣಣ್ಣ ಅದನ್ನ ನೋಡಿ ಏನಿದು ಅಂತ ಕೇಳಿದ್ದಕ್ಕೆ ಕಣ್ಣು ಕೆಂಪಗೆ ಮಾಡ್ಕೊಂಡು, 'ಈಗ ಸುಮ್ನೆ ಹೋಗ್ಲಿಲ್ಲಾ ಅಂದ್ರೆ ಚಪ್ಪಲಿ ಏಟು ಬೀಳ್ತವೆ' ಅಂತ್ಹೇಳಿ ಕೈಗೂ ಸಿಗ್ದೇ ಓಡೋದ್ನಂತೆ. ಎಲ್ಲೋ ಇಲ್ಲೇ ತಪ್ಪಿಸ್ಕೊಂಡು ಅವತ್ಕೊಂಡಿರ್ತಾನೆ. ಹಿಡ್ಕೊಂಡು ಬರೋಕೆ ಜನ್ರೂ ಹೋಗಿದಾರೆ. ಸಿಗ್ದೇ ಎಲ್ಲೋಗ್ತಾನೆ ಬೋಳಿಮಗ!'- ವ್ಯಕ್ತಿ ಮಾತನಾಡುತ್ತಲೇ ಗುಡುಗಿದ.

ಮತ್ತೋರ್ವ- 'ಅವ್ನು ಕಟ್ಟಿರೋದು ನೋಡಿದ್ರೆ ಏನೋ ಮಾಟ ಮಾಡಿ ಕಟ್ಟಿಸ್ದಂಗಿದೆ. ಯಾರೋ, ಯಾದ್ರೋರ್ ಮೇಲಿನ್ ದ್ವೇಷಕ್ಕೆ ಆಡ್ಸಿರ್ರೋ ಆಟ ಇದು. ಯಾರ್ಗೂರ್ ಸಂಶಯ ಬರರ್ದಿರ್ಲಿ ಅಂತ ಆ ಮಗೀ ಕೈಯ್ಲಿ ಇದೆಲ್ಲ ಮಾಡ್ಸಿದಾರೆ. ನಮ್ಮೂರಿಗೆ, ನಮ್ಮ್ ಜನಕ್ಕೆ ಏನೇನ್ ಕಾದಿದ್ಯೋ. ಆ ತಾಯಿನೇ ಕಾಯ್ಬೇಕು' ಎನ್ನುತ್ತಾ, ನಾನೆಂದೂ ಕೇಳಿರದ ಮತ್ತು ಕೇಳಿದ ಐದೇ ನಿಮಿಷಗಳಲ್ಲಿ ಮರೆತುಬಿಡುವ ಯಾವುದೋ ಹೆಣ್ಣುದೇವರ ಹೆಸರು ಹೇಳಿ ಬೇಡಿಕೊಂಡ. ಇನ್ನೊಬ್ಬನ್ಯಾರೋ ಆ ಹುಡುಗನ ತಲೆ ಸರಿಯಿಲ್ಲ ಎಂದೋ, ಮತ್ಯಾರೋ ಅವರ ಮನೆ ಕಡೆಯ ಹರಕೆ ಏನಾದರೂ ಈ ತರ ಇರಬಹುದೇನೋ ಎಂದರು. ಹಾಗಿದ್ದರೆ ಅವನು ದಿನಸಿ ಅಂಗಡಿ ಶರಣಣ್ಣನಿಗ್ಯಾಕೆ ಬೈದು ಓಡಬೇಕು ಎಂದು ನಡುವೆ ಯಾರೋ ಮಾತು ಸೇರಿಸಿದರು. ತುಸು ಹೊತ್ತು ಇದು ಹೀಗೇ ಮುಂದುವರಿಯಿತು.